ಅಸಹಾಯಕತೆ ಎಲ್ಲರ ಮುಖದಲ್ಲಿ ರಾರಾಜಿಸುತ್ತಿತ್ತು.

ಬೀಭತ್ಸ ನಾಟಕವನ್ನು ಆಡಲು ಆಕಾಶದಿಂದ ಇಳಿಬಿಟ್ಟ ಪರದೆಯಂತಿದ್ದ ಆ ದಾವಾನಲ-ಕಾರ್ಮೋಡಗಳು; ಸಾವಿನ ಮುಂಗಾಳಿಗೆ ಬೆದರಿದ ನಮಗೆ ಸುಟ್ಟ ಕರಕಲು ವಾಸನೆ ಅಥವಾ ಅದರ ಕುರಿತ ನಮ್ಮ ಗ್ರಹಿಕೆಯೂ ಇರಬಹುದು, ಕ್ಷಣಕ್ಷಣಕ್ಕೂ ಬದಲಾಗತೊಡಗಿತು; ವಾಸನೆಯ ಮೂಲದ ಹೊಸಹೊಸ ಮುಖಗಳು ಆವಿಷ್ಕಾರಗೊಂಡು ತಗ್ಗಿದ ಸ್ವರದಲ್ಲಿ ಪ್ರಸ್ತಾಪಗೊಂಡವು- 'ಕಾಡುಪ್ರಾಣಿಗಳು ಜೀವಂತವಾಗಿ ಬೆಂಕಿಗೆ ಆಹುತಿಯಾಗುತ್ತಿವೆ. ಅವುಗಳು ಸುಟ್ಟ ವಾಸನೆ ಇದು..' ಎಂದೊಬ್ಬರು ಹೇಳಿದರೆ, 'ಇರಲಿಕ್ಕಿಲ್ಲ, ಇಷ್ಟು ಘಾಟು ಬರುತ್ತಿರಬೇಕಾದರೆ ಹತ್ತಿರದಲ್ಲಿಯೇ.. ಪಕ್ಕದಲ್ಲಿ ಒಂದು ಹಾಲಿನ ಡೇರೆಯಿತ್ತು. ಅಲ್ಲಿನ ಮೂಕಪ್ರಾಣಿಗಳು ತಪ್ಪಿಸಿಕೊಂಡು ಓಡಲಾಗದೆ...' ಎಂದು ಮತ್ತೊಬ್ಬರು ತಮ್ಮ ಮಾತು ಪೂರ್ತಿಮಾಡಲು ಆಗದೆ ತೊದಲಿದರು; ಇನ್ನಾರೋ 'ಇದ್ಯಾವುದೂ ಅಲ್ಲ, ಒಣಹುಲ್ಲು ಮತ್ತು ಹಸಿರು ಗಿಡಗಳು ಒಟ್ಟಿಗೇ ಸುಟ್ಟು ಕರಕಲಾಗುತ್ತಿರುವುದರಿಂದ ಬರುತ್ತಿದೆ. ಅಷ್ಟೇ, ಭಯಪಡುವಂತದ್ದೇನೂ ಇಲ್ಲ' ಎಂದು ತಮಗೆ ತಾವೇ ಸಮಾಧಾನ ಮಾಡಿಕೊಳ್ಳುತ್ತಿದ್ದರು.'ಎರಡು ವರ್ಷಗಳ ಹಿಂದೆ ಪಕ್ಕದ ಊರಿಗೆ ಊರೇ ಜನಸಮೇತ ಭಸ್ಮವಾಗಿಹೋಗಿತ್ತು' ಎಂದು ಇನ್ನೊಬ್ಬರು ನಿರಾಶಾದಾಯಕ ನಿಟ್ಟುಸಿರು ಬಿಡುತ್ತಿದ್ದರು. ಊಹಾಪೋಹಗಳು ನಂಬಲಾರದ, ತಿರಸ್ಕರಿಸಲೂ ಆಗದ ಸಾಕ್ಷಿಗಳ ಸಮೇತ ತೇಲಿ ಬರುತ್ತಿದ್ದವು; ಅವುಗಳ ಪ್ರತಿಧ್ವನಿ ನನ್ನ ಎಚ್ಚರದ ಮನಸ್ಸನ್ನೂ ಗಲಿಬಿಲಿಗೊಳಿಸತೊಡಗಿತು. ಆಗಾಗ ಅಗ್ನಿಶಾಮಕ ಇಂಜಿನ್ನಿನ ಸೈರನ್ನು ಕೇಳಿಬರುತ್ತಿತ್ತು; ಅದು ನಮ್ಮತ್ತ ಬರುತ್ತಿದೆಯೋ, ನಮ್ಮಿಂದ ದೂರ ಹೋಗುತ್ತಿದೆಯೋ, ಅಥವಾ ನಮ್ಮನ್ನು ಸುತ್ತು ಹಾಕುತ್ತಿದೆಯೋ ತಿಳಿಯದಾಗಿ ಅಲ್ಪಸ್ವಲ್ಪ ಆಸೆಯೊಟ್ಟಿಗೆ ನಿಟ್ಟುಸಿರು ಬಿಡುತ್ತಿದ್ದೆವು. 'ಮೇಲೆ ಹೆಲಿಕಾಪ್ಟರ್ ಸದ್ದು ಕೇಳುತ್ತಿದ್ದೀರೇನು? ಅದು ಬಹುಶಃ ಈ ಬೆಂಕಿಯನ್ನು ನಂದಿಸಲು ಸಹಾಯ ಮಾಡಬಹುದು' ಎಂದಾಗ ನಾನೂ ಆಲಿಸಿದೆ. ಆ ಗದ್ದಲದಲ್ಲಿ, ಆ ಮನಸ್ಥಿತಿಯಲ್ಲಿ ನಾವು ಏನು ಬೇಕಾದರೂ ಕೇಳಿಸಿಕೊಳ್ಳಬಹುದಿತ್ತು. ಕಾರುಗಳು ಅಲ್ಲಿಂದ ಹೋಗುತ್ತಿರುವ ಸದ್ದು; ಬಸ್ಸು ಬರಲಿರುವ ಸುದ್ದಿ, ಯಾವ ದಾರಿಯಿಂದ ಹೋದರೆ ಕ್ಷೇಮ, ಎಲ್ಲಿಗೆ ಹೋಗಿ ತಲುಪಿದರೆ ಸುರಕ್ಷತೆಯ ಮಡಿಲು ಸೇರಿದಂತೆ ಎನ್ನುವ ಭರವಸೆಯ ಮಾತುಗಳು ಕಿವಿಗಪ್ಪಳಿಸುತ್ತಿದ್ದವು. ನಾನು ನನಗಾಗಿ ಬರುವ ಕಾರಿಗಾಗಿ ಕಾಯತೊಡಗಿದೆ.

ಗಾಳಿ ಮತ್ತಷ್ಟು ಬಿರುಸಾಯಿತು. ದೀಪಗಳು ಆರಿಹೋಗಿ ಎಮರ್ಜೆನ್ಸಿ ದೀಪಗಳು ಹೊತ್ತಿಕೊಂಡವು. ದೂರದಲ್ಲೀಗ ಬೆಂಕಿಯ ಕೆಂಬಣ್ಣ ಕಾಣತೊಡಗಿತು. ವಾತಾವರಣ ಇನ್ನಷ್ಟು ಬಿಸಿಯಾಗಿ, ಟ್ರಾಂಕ್ವಿಲ್ ಮೀಡೋಸ್ ಈಗ ತಪ್ಪಿಸಿಕೊಂಡು ಹೊರಗೆ ಹೋಗಲು ದಾರಿಯಿಲ್ಲದ ನರಕದಂತೆ ಅಥವಾ ಯಾರಿಗೆ ಶರಣಾಗಬೇಕು ಎಂದು ತಿಳಿಯಲಾಗದ ಯುದ್ಧಭೂಮಿಯಂತೆ ಕಾಣುತ್ತಿತ್ತು. ನಾನಾಗ ಬೆಂಕಿಯ ಅಥವಾ ಮೂಗಿನ ಮೂಲಕ ಒಳಸೇರಿದ ಹೊಗೆಯ ಅಥವಾ ನಾಲಿಗೆಯ ತುದಿಯಲ್ಲಿ ಕೂತ ಬೂದಿಯ ರುಚಿಯನ್ನೂ ಅನುಭವಿಸಲ್ಲವಳಾಗಿದ್ದೆ. ಹತ್ತಿರ ಧಾವಿಸುತ್ತಿದ್ದ ಬೆಂಕಿ, ಸುತ್ತ ಅವರಿಸಿಕೊಳ್ಳುತ್ತಿದ್ದ ಹೊಗೆ, ಸೋನೆ ಮಳೆಯಂತೆ ಕೆಳಗಿಳಿಯುತ್ತಿರುವ ಬೂದಿ, ಸುತ್ತಲ ಎಲ್ಲರ ಮುಖದಲ್ಲಿ ಕುಣಿಯತೊಡಗಿದ್ದ ಭಯದಿಂದ ನಾನು ನಡುಗತೊಡಗಿದೆ. ಸಾಯಲೂ ಸಿದ್ಧಳಾಗಬೇಕಿದೆ ಎನ್ನುವ ಯೋಚನೆ ಬರತೊಡಗಿತು. ಕಣ್ಣುಮುಚ್ಚಿಕೊಂಡೆ; ಎದೆಯಲ್ಲಿ ಕುಟ್ಟುತ್ತಿದ್ದ ಸಾವಿನ ಗೆಜ್ಜೆಕುಣಿತವನ್ನು ಕೇಳದಿರಲು ಪ್ರಯತ್ನಿಸಿದೆ. ಅದೇ ಸಮಯದಲ್ಲಿ ಯಾರೋ ನನ್ನ ಹೆಸರನ್ನು ಎಚ್ಚರದಿಂದ, ಪ್ರೀತಿಯಿಂದ, ಅದರ ಸ್ವರವ್ಯಂಜನಗಳನ್ನು ಮೆಲ್ಲುತ್ತ, ಆದರೆ ಮೊದಲೆಂದೂ ಕೇಳಿರದ ಅತ್ಯವಸರದಿಂದ, 'ವ...ಸುಂ...ಧ...ರಾ...' ಎಂದು ಕೂಗುತ್ತಿರುವುದನ್ನು ಕೇಳಿ ರೋಮಾಂಚನವಾಯಿತು. ಆ ಕರೆ ಬಂದತ್ತ ಕಡೆ ಗುಂಪಿನ ನಡುವೆಯೇ ದಾರಿ ಮಾಡಿಕೊಂಡು ಹೋಗತೊಡಗಿದೆ. ಯಾರೋ ನನ್ನ ಕೈ ಹಿಡಿದು ದಾಟಿಸಿದರು. ಮತ್ಯಾರೋ ಕಾರಿನ ಬಾಗಿಲು ತೆರೆದರು. ತಾವೂ ಬರಬಹುದೇ ಎನ್ನುವ ಕೂಗೂ ಕೇಳಿಸಿತು. ನಾನು ಕಾರಿನೊಳಗೇ ಕೂತವಳೇ 'ಬೇಗ ಹೋಗಿಬಿಡೋಣ' ಎಂದು ಮೆಲ್ಲಗೆ ಉಸುರಿದೆ. ಹೊರಗೆ ಹಬ್ಬಿಕೊಂಡಿದ್ದ ಸುಟ್ಟ ಕರಕಲು ವಾಸನೆಯೊಟ್ಟಿಗೆ ಕಾರಿನ ರೆಫ್ರೆಷರಿಗೆ ಹಾಕಿದ್ದ ಶ್ರೀಗಂಧದ ಎಣ್ಣೆಯ ಸುವಾಸನೆ ಬೆರೆತುಕೊಂಡಿತು. ಇನ್ನೂ ಅನುಭವಕ್ಕೆ